## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 925/2024

ಸಾಕ್ಷಿಗೆ ದಿನಾಂಕ 18-09-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 2 P.W.: 1

| | | |
|---|---|---|
| ಹೆಸರು | ಃ | ಯತೀಶ ಕೆ |
| ತಂದೆಯ ಹೆಸರು | ಃ | ಪಂಪಾಪತಿ |
| ವಯಸ್ಸು | ಃ | 29 ವರ್ಷ |
| ಉದ್ಯೋಗ | ಃ | ಬ್ಯಾಂಕ್ ನೌಕರ |
| ವಾಸ ಸ್ಥಳ | ಃ | ಕೂಡ್ಲಿಗಿ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಈ ಪ್ರಕರಣದ ಆರೋಪಿ ನನಗೆ ಗೊತ್ತು. ಆರೋಪಿತನು ಕಲ್ಲಹಳ್ಳಿ ಗ್ರಾಮದ ಒಂದು ಅಂಗಡಿಯಲ್ಲಿ ಮಧ್ಯವನ್ನು ಮಾರಾಟ ಮಾಡುತ್ತಿದ್ದ. ಆಗ ಪೋಲೀಸರು ಆ ಅಂಗಡಿಯ ಮೇಲೆ ರೈಡ್ ಮಾಡಿರುತ್ತಾರೆ ಅಲ್ಲಿ ನಾನು ಹಾಜರಿದ್ದೆ. ಈಗ ಸುಮಾರು 7-8 ತಿಂಗಳ ಹಿಂದೆ ಆ ರೀತಿ ರೈಡ್ ಮಾಡಿರುತ್ತಾರೆ. ಪೋಲೀಸರು ಅಲ್ಲಿದ್ದಂತಹ ಮಧ್ಯದ ಓ ಸಿ ಬಾಟಲಿ, ಬಿಯರ್ ಬಾಟಲಿಗಳನ್ನು ಅಮಾನತ್ತುಪಡಿಸಿಕೊಂಡರು ಅಲ್ಲಿ ಅವರು ನಮಗೆ ಸಾಕ್ಷಿಗೆ ಸಹಿ ಮಾಡು ಅಂದರು ಅದರಂತೆ ಅವರು ನಮಗೆ ಮಧ್ಯ ಅಮಾನತ್ತುಪಡಿಕೊಂಡಿರುವ ವಿಚಾರ ತಿಳಿಸಿದರು ಮತ್ತು ಸದರಿ ದಾಖಲೆಗೆ ನಮ್ಮ ಸಹಿಯನ್ನು ಪಡೆದರು. ಅದನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸಾಕ್ಷಿಯು ಘಟನಾ ಸ್ಥಳದ ಪಂಚನಾಮೆಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ-1 ಎಂದು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ಸದರಿ ಮಧ್ಯವನ್ನು ನಾಗರಾಜ ನಾಯ್ಕ ಇವನು ಮಾರಾಟ ಮಾಡುತ್ತಿದ್ದ ಅವನನ್ನು ನೋಡಿದರೆ ನಾನು ಗುರುತಿಸುತ್ತೇನೆ. ಆರೋಪಿಯ ಗೈರುಹಾಜರಾತಿಯಲ್ಲಿ ಆರೋಪಿಯನ್ನು ಗುರುತಿಸಲು ಆರೋಪಿ ಪರ ವಕೀಲರ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ. ಅಮಾನತ್ತುಪಡಿಸಿಕೊಂಡಿರುವ ಮು ಮಾಲುಗಳು ಸುಮಾರು 15 ಬಾಟಲಿಗಳು ಇದ್ದವು. ಆ ದಿನ ನನ್ನ ಜೊತೆ ಚಾಸಾ-2 ಹಾಜರಿದ್ದ. ಆ ದಿನ ಅಮಾನತ್ತುಪಡಿಸಿಕೊಂಡ ಮಧ್ಯದ ಬಾಟಲಿಗಳನ್ನು ನಾನು ನೋಡಿದರೆ ಗುರುತಿಸುತ್ತೇನೆ. ಆ ದಿನ ಅಮಾನತ್ತುಪಡಿಸಿಕೊಂಡ 180 ಮಿಲಿಯ ಓ ಟಿ ವಿಸ್ಕಿಯ 17 ಟೆಟ್ರಾ ಪೌಚುಗಳು, 180 ಮಿಲಿಯ ಮಾಕ್ವಿಂಟೋಶ್ ವಿಸ್ಕಿಯ 23 ಟೆಟ್ರಾ ಪೌಚುಗಳು, 90 ಮಿಲಿಯ ಓ ಸಿ ವಿಸ್ಕಿಯ 96 ಟೆಟ್ರಾ ಪೌಚುಗಳು, 90 ಮಿಲಿಯ ಹೈವಾರ್ಡ್ಸ್ ವಿಸ್ಕಿಯ 91 ಟೆಟ್ರಾ ಪೌಚುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು ಮಾ-1 ರಿಂದ 4 ಎಂದು ಮತ್ತು ಚೀಲವನ್ನು ಮುಮಾ-5

ಎಂದು ಗುರುತಿಸಲಾಯಿತು. ಸದರಿ ಮು ಮಾಲುಗಳಿಗೆ ನನ್ನ ಸಹಿವುಳ್ಳ ಚೀಟಿಯನ್ನು ಅಂಟಿಸಿದ್ದು ಸಹಾ ಇರುತ್ತದೆ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ಪೋಲೀಸರು ದಾಳಿ ಮಾಡಿ ಪಂಚನಾಮೆ ಜರುಗಿಸಿದ ದಿಃ25-03-2024 ಆಗಿರುತ್ತದೆ ಎಂದರೆ ಸರಿ. ಪಂಚನಾಮೆ ಸಮಯ ಮದ್ಯಾಹ್ನ 3.35 ರಿಂದ 4.20 ಗಂಟೆ ಆಗಿತ್ತು ಎಂದರೆ ಸರಿ.

ಪಾಟೀ ಸವಾಲು. ಆರೋಪಿ ಪರ ಶ್ರೀ ಎ ಕೆ ವಕೀಲರಿಂದಃ-

ಪೋಲೀಸರು ನನಗೆ ಪಂಚರಾಗಿ ಬರಲು ನೋಟೀಸ್ ಕೊಟ್ಟಿಲ್ಲ ಫೋನ್ ಮಾಡಿ ಹೇಳಿದರು. ಆ ದಿನ ನಾನು ಘಟನಾ ಸ್ಥಳದಲ್ಲಿದ್ದೆ. ಆರೋಪಿತನ ಮನೆಯ ಮುಂದಿನ ಅಂಗಡಿಯ ಜಾಗ ಘಟನಾ ಸ್ಥಳವಾಗಿರುತ್ತದೆ. ಆರೋಪಿತನದು ಅಲ್ಲಿ ಶೆಡ್ ಅಂಗಡಿ ಇದೆ. ಸದರಿ ಅಂಗಡಿಗೆ ಹೆಸರು ಏನಾದರೂ ಇದೆಯಾ ಎಂದು ನಾನು ಗಮನಿಸಿಲ್ಲ. ಘಟನಾ ಸ್ಥಳದಲ್ಲಿ ಆ ದಿನ ಸುಮಾರು 15 ಜನ ಸೇರಿದ್ದರು. ನನಗೆ ಅವರ ಹೆಸರು ಹೇಳಲು ಆಗುವುದಿಲ್ಲ ನಾನು ಆ ಊರಿನವನು ಅಲ್ಲ. ಘಟನಾ ಸ್ಥಳದ ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ಪೋಲೀಸರು ಮಧ್ಯದ ಪಚಚುಗಳನ್ನು ನಮ್ಮ ಸಮಕ್ಷಮದಲ್ಲಿ ಎಣಿಕೆ ಮಾಡಿಲ್ಲ. ಯಾವ್ಯಾವ ಬ್ರಾಂಡಿನ ಎಷ್ಟು ಟೆಟ್ರಾ ಪಚಚುಗಳಿದ್ದವು ಅನ್ನುವುದು ನಿಮಗೆ ಹೇಳಲು ಬರುತ್ತಾ ಎಂದರೆ ಸಾಕ್ಷಿಯು ನಾನು ನೋಡಿದಾಗ ಪೋಲೀಸರು ಒಂದು ಚೀಲದಲ್ಲಿ ಮಧ್ಯದ ಪೌಚುಗಳನ್ನು ತುಂಬುತ್ತಿದ್ದರು ಅವು ಎಷ್ಟು ಇದ್ದವೆಂದು ನನಗೆ ಗೊತ್ತಿಲ್ಲ. ಆ ದಿನ ನಾನು 4 ಹಾಳೆಗಳಿಗೆ ಸಹಿ ಮಾಡಿರುತ್ತೇನೆ. ನನ್ನ ಜೊತೆ ಚಾಸಾ-3 ರವರು ಸಹಿ ಮಾಡಿರುತ್ತಾರೆ. ಘಟನಾ ಸ್ಥಳದಲ್ಲಿ ಒಂದು ಸಹಿಯನ್ನು ಪೋಲೀಸರು ಪಡೆದರು 3 ಸಹಿಗಳನ್ನು ಪೋಲೀಸ್ ಠಾಣೆಯಲ್ಲಿ ಪಡೆದಿರುತ್ತಾರೆ. ಘಟನಾ ಸ್ಥಳದಲ್ಲಿ ನಾನು ಬಿಳಿ ಖಾಲಿ ಹಾಳೆಗೆ ಸಹಿ ಮಾಡಿರುತ್ತೇನೆ. ನಾನು ಯಾವುದೇ ಘಟನಾ ಸ್ಥಳಕ್ಕೆ ಹೋಗಿಲ್ಲ, ನನ್ನ ಸಮಕ್ಷಮ ಪೋಲೀಸರು ಯಾವುದೇ ಪಂಚನಾಮೆ ಮಾಡಿಲ್ಲವೆಂದರೆ ಸರಿಯಲ್ಲ. ನಾನು ಆರೋಪಿ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದಾನೆನ್ನುವ ವಿಚಾರಕ್ಕಾಗಿ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಪೋಲೀಸರು ಯಾವುದೇ ಮು ಮಾಲು ಅಮಾನತ್ತುಪಡಿಸಿಕೊಂಡಿಲ್ಲ, ಆರೋಪಿಗೂ ಮು ಮಾಲುಗಳಿಗೂ ಯಾವುದೇ ಸಂಬಂಧವಿಲ್ಲ, ಪೋಲೀಸರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ